# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ವೈದ್ಯನಾಥನ್ ಸಮಿತಿ ಶಿಫಾರಸ್ಸುಗಳನ್ವಯ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ದೈಹಿಕ ಶಿಕ್ಷಣ ಮತ್ತು ಯೋಗ ಶಿಕ್ಷಣವನ್ನು ಅನುಷ್ಠಾನಗೊಳಿಸುವ ಬಗ್ಗೆ.

ಓದಲಾಗಿದೆ:- 1. ದಿನಾಂಕ 27-04-2007ರಂದು ಅಪರ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಗಳು.

2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, ರವರ ಪತ್ರ ಸಂಖ್ಯೆ:ದೈಶಿ 5 ಸಿಪಿಐ 07 ಇತರೆ /07 ದಿನಾಂಕ: 13-02-2007

**ಪ್ರಸ್ತಾವನೆ:-**

(1) ಮೇಲೆ ಓದಲಾದ (1).ರ 27-04-2007ರಂದು ಅಪರ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ನಡೆದ ಹೊಸ ಯೋಜನಾ ಮಂಜೂರಾತಿ ಸಭೆಯ ನಡವಳಿಯಲ್ಲಿ 2007-08 ನೇ ಸಾಲಿನಿಂದ ವೈದ್ಯನಾಥನ್ ಸಮಿತಿ ಶಿಫಾರಸ್ಸುಗಳನ್ವಯ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ದೈಹಿಕ ಶಿಕ್ಷಣ ಮತ್ತು ಯೋಗ ಶಿಕ್ಷಣವನ್ನು ಅನುಷ್ಠಾನಗೊಳಿಸು ಬಗ್ಗೆ ಚರ್ಚಿಸಿ ಇದು ಹೊಸ ಕಾರ್ಯಕ್ರಮವಾದ್ದರಿಂದ ಕಡತದ ಮೇಲೆ ಆರ್ಥಿಕ ಇಲಾಖೆಗಳ ಸಹಮತಿಯನ್ನು ಪಡೆಯಲು ಸೂಚಿಸಿತು.

(2) ಮೇಲೆ ಓದಲಾದ (2) ರ ಪತ್ರದಲ್ಲಿ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರುರವರು, ವೈದ್ಯನಾಥನ್ ಸಮಿತಿ ಶಿಫಾರಸ್ಸುಗಳನ್ವಯ ರಾಜ್ಯದ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ದೈಹಿಕ ಶಿಕ್ಷಣ ಮತ್ತು ಯೋಗ ಶಿಕ್ಷಣ ವನ್ನು ಜಾರಿಗೊಳಿಸಲು ಪ್ರಸ್ತಾಪಿಸಲಾಗಿದ್ದು, ಪ್ರಥಮ ಹಂತದಲ್ಲಿ ರಾಜ್ಯದ ಹಿಂದುಳಿದ ಶೈಕ್ಷಣಿಕ ತಾಲ್ಲೂಕುಗಳಲ್ಲಿ ಸದರಿ ಯೋಜನೆಯನ್ನು ಜಾರಿಗೊಳಿಸಲು ಪ್ರಸ್ತಾಪಿಸಿ, ಇದಕ್ಕಾಗಿ 2007-08ನೇ ಸಾಲಿಗೆ ಲೆಕ್ಕಶೀರ್ಷಿಕೆ 2202-80-800-0-24-059(ಯೋಜನೆ)ಯಡಿ 200.00ಲಕ್ಷ ರೂಗಳನ್ನು ಒದಗಿಸಲಾಗಿದೆ ಎಂದು ತಿಳಿಸುತ್ತಾ ಸದರಿ ಮೊತ್ತವನ್ನು ಈ ಕೆಳಕಂಡಂತೆ ಬಳಕೆ ಕೊಳ್ಳಲು ಸರ್ಕಾರದ ಅನುಮೋದನೆಯನ್ನು ಕೋರಿರುತ್ತಾರೆ.

1. ಶೈಕ್ಷಣಿಕವಾಗಿ ಹಿಂದುಳಿದ 50 ತಾಲ್ಲೂಕುಗಳ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಕ್ರೀಡಾ ಸಾಮಗ್ರಿ ಮತ್ತು ಕಾರ್ಯಾಗಾರ ಮತ್ತು ಸ್ಪರ್ಧೆಗಳನ್ನು ಏರ್ಪಡಿಸಲು[ಪ್ರತಿ ತಾಲ್ಲೂಕಿಗೆ 3.00ಲಕ್ಷರೂಗಳಂತೆ] — 150.00ಲಕ್ಷರೂಗಳು

2. ಹುದ್ದೆಗಳನ್ನು ಮೇಲ್ದರ್ಜೆಗೇರಿಸುವುದು

| ಕ್ರ.ಸಂ | ಖಾಲಿ ಇರುವ ಹುದ್ದೆ | ಒಟ್ಟು ಹುದ್ದೆ | ಮೇಲ್ದರ್ಜೆಗೇರಿಸಲು ಪ್ರಸ್ತಾಪಿಸಿರುವುದು | ಮೊತ್ತ [ಲಕ್ಷರೂಗಳಲ್ಲಿ] |
|---|---|---|---|---|
| 1. | ಉಪನಿರ್ದೇಶಕರು[ದೈಹಿಕಶಿಕ್ಷಣ] [18150-26925] | 1 | ಜಂಟಿ ನಿರ್ದೇಶಕರು[ದೈಹಿಕ ಶಿಕ್ಷಣ] [20025-28275] | 0.065 |
| 2. | ವಿಭಾಗೀಯ ದೈಹಿಕ ಶಿಕ್ಷಣ ಅಧೀಕ್ಷಕರು [14050-25050] | 4 | ವಿಭಾಗೀಯ ಉಪ ನಿರ್ದೇಶಕರು, [ದೈಹಿಕಶಿಕ್ಷಣ] [18150-26925] | 0.23 |
| 3. | ಜಿಲ್ಲಾ ಅಧೀಕ್ಷಕರು[ಪ್ರಾಥಮಿಕ ಶಿಕ್ಷಣ] [11400-21600] | 32 | ಜಿಲ್ಲಾ ಅಧಿಕಾರಿಗಳು, ಕ್ರೀಡೆ ಮತ್ತು ದೈಹಿಕ ಶಿಕ್ಷಣ [14050-25050] | 1.48 |
| 4. | ತಾಲ್ಲೂಕು ದೈಹಿಕ ಶಿಕ್ಷಣ ಸಮನ್ವಯಾಧಿಕಾರಿಗಳು [8825-16000] | 202 | ತಾಲ್ಲೂಕು ಕ್ರೀಡೆ ಮತ್ತು ದೈಹಿಕ ಶಿಕ್ಷಣಾಧಿಕಾರಿಗಳು [11400-21600] | 6.79 |
| | | 239 | ಒಟ್ಟು | 8.565 |

C:\Documents and Settings\ds_plg-ep\My Documents\g.O.Order.doc

kpeta.weebly.com

Scanned by CamScanner

3. ಹೊಸ ಹುದ್ದೆಗಳನ್ನು ಸೃಜಿಸುವುದು

| ಕ್ರ.ಸಂ | ಸೃಜಿಸಬೇಕಾದ ಹೊಸ ಹುದ್ದೆಗಳ ವಿವರ | ಮೊತ್ತ[ಲಕ್ಷರೂಗಳಲ್ಲಿ] |
|---|---|---|
| 1. | ಕಿರಿಯ ಪ ದರ್ಜೆ ಅಧಿಕಾರಿಗಳ ಹುದ್ದೆಗಳ ಸೃಜನೆ [ಆಯುಕ್ತರು, ಸಾ.ಶಿ.ಇ ಕಛೇರಿ, ಕರ್ನಾಟಕ ಸೆಕೆಂಡರಿ ಶಿಕ್ಷಣ ಪರೀಕ್ಷಾ ಮಂಡಳಿ, ಮತ್ತು ಸಂಶೋಧನೆ ಮತ್ತು ತರಬೇತಿ ಇಲಾಖೆಗಳಲ್ಲಿ ತಲಾ ಒಂದು ಹುದ್ದೆಗಳು] [16000 X 3 X 6 ತಿಂಗಳು] | 2.88 |
| 2. | ಶೈಕ್ಷಣಿಕವಾಗಿ ಅತ್ಯಂತ ಹಿಂದುಳಿದಿರುವ ತಾಲ್ಲೂಕುಗಳಲ್ಲಿ 500ಕ್ಕಿಂತ ಹೆಚ್ಚು ವಿದ್ಯಾರ್ಥಿಗಳಿರುವ ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಗ್ರೇಡ್-1 ದರ್ಜೆಯ 39 ದೈಹಿಕ ಶಿಕ್ಷಕರ ಹುದ್ದೆಗಳನ್ನು ಸೃಜಿಸಲು [12000 X 39 X 6 ತಿಂಗಳು] | 28.08 |
| 3. | ಶೈಕ್ಷಣಿಕವಾಗಿ ಅತ್ಯಂತ ಹಿಂದುಳಿದಿರುವ ತಾಲ್ಲೂಕುಗಳಲ್ಲಿ 500ಕ್ಕಿಂತ ಹೆಚ್ಚು ವಿದ್ಯಾರ್ಥಿಗಳಿರುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ 15 ದೈಹಿಕ ಶಿಕ್ಷಣ ಉಪನ್ಯಾಸಕರ ಹುದ್ದೆಗಳನ್ನು ಸೃಜಿಸಲು [15000 X 15 X 6 ತಿಂಗಳು] | 13.50 |

(3) ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸುತ್ತದೆ.

**<u>ಸರ್ಕಾರಿ ಆದೇಶ ಸಂಖ್ಯೆ: ಇಡಿ: 95:ಯೋಯೋಕ 2007 ಬೆಂಗಳೂರು, ದಿ.30-08-2007</u>**

**<u>[ಇಡಿ: 134: ಸ್ಕೀಮರ(ಯುನಿಕ್) 2007, ದಿನಾಂಕ 30-08-2007]</u>**

(4) 2007-08ನೇ ಸಾಲಿಗೆ ಲೆಕ್ಕಶೀರ್ಷಿಕೆ:2202-80-800-0-24-059(ಯೋಜನೆ)ಯಡಿ ಒದಗಿಸಲಾದ 200.00ಲಕ್ಷರೂಗಳ[ಇನ್ನೂರುಲಕ್ಷರೂಪಾಯಿಗಳುಮಾತ್ರ] ಮಿತಿಯೊಳಗೆ ವೈದ್ಯನಾಥನ್ ಸಮಿತಿ ಶಿಫಾರಸ್ಸುಗಳನ್ವಯ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ದೈಹಿಕ ಶಿಕ್ಷಣ ಮತ್ತು ಯೋಗಶಿಕ್ಷಣವನ್ನು ಅನುಷ್ಠಾನಗೊಳಿಸಲು ಈ ಕೆಳಕಂಡ ಷರತ್ತುಗಳನ್ನು ವಿಧಿಸಿ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಅನುಮತಿ ನೀಡಿದೆ.

- ದೈಹಿಕ ಶಿಕ್ಷಣ ಶಿಕ್ಷಕರುಗಳಿಗೆ ಸೇವಾ ನಿರತ ತರಬೇತಿ ನೀಡಿ ಅವರುಗಳೇ ಯೋಗ ಶಿಕ್ಷಣವನ್ನು ಶಾಲೆಗಳಲ್ಲಿ ನೀಡತಕ್ಕದ್ದು.
- ಇದಕ್ಕಾಗಿ ಯಾವುದೇ ಹೆಚ್ಚುವರಿ ಅನುದಾನವನ್ನು ಕೋರಬಾರದು.
- ಇದಕ್ಕೆ ಒದಗಿಸಲಾದ ಮೊತ್ತವನ್ನು ಈ ಕೆಳಕಂಡಂತೆ ಬಳಸಿಕೊಳ್ಳಲು ಅನುಮೋದಿಸಲಾಗಿದೆ.

| | |
|---|---|
| ಅ. ಶೈಕ್ಷಣಿಕವಾಗಿ ಹಿಂದುಳಿದ 50 ತಾಲ್ಲೂಕುಗಳ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಕ್ರೀಡಾ ಸಾಮಗ್ರಿ ಮತ್ತು ಕಾರ್ಯಾಗಾರ ಮತ್ತು ಸ್ಪರ್ಧೆಗಳನ್ನು ಏರ್ಪಡಿಸಲು[ಪ್ರತಿ ತಾಲ್ಲೂಕಿಗೆ 3.00ಲಕ್ಷರೂಗಳಂತೆ] | 147.00ಲಕ್ಷರೂಗಳು |

ಆ. ಕೆಳಕಂಡ ಹುದ್ದೆಗಳನ್ನು ಮೇಲ್ದರ್ಜೆಗೇರಿಸಲು ಆದೇಶಿಸಿದೆ.

kpeta.weebly.com

Scanned by CamScanner

| ಕ್ರ.ಸಂ | ಖಾಲಿ ಇರುವ ಹುದ್ದೆ | ಒಟ್ಟು ಹುದ್ದೆ | ಮೇಲ್ದರ್ಜೆಗೇರಿಸಲು ಪ್ರಸ್ತಾಪಿಸಿರುವುದು | ಮೊತ್ತ (ಲಕ್ಷರೂಗಳಲ್ಲಿ) |
|---|---|---|---|---|
| 1. | ಉಪನಿರ್ದೇಶಕರು(ದೈಹಿಕಶಿಕ್ಷಣ) [18150-26925] | 1 | ಜಂಟಿ ನಿರ್ದೇಶಕರು(ದೈಹಿಕ ಶಿಕ್ಷಣ) [20025-28275] | 0.065 |
| 2. | ವಿಭಾಗೀಯ ದೈಹಿಕ ಶಿಕ್ಷಣ ಅಧೀಕ್ಷಕರು [14050-25050] | 4 | ವಿಭಾಗೀಯ ಉಪನಿರ್ದೇಶಕರು. (ದೈಹಿಕಶಿಕ್ಷಣ) [18150-26925] | 0.23 |
| 3. | ಜಿಲ್ಲಾ ಅಧೀಕ್ಷಕರು(ಪ್ರಾಥಮಿಕ ಶಿಕ್ಷಣ) [11400-21600] | 32 | ಜಿಲ್ಲಾ ಅಧಿಕಾರಿಗಳು, ಕ್ರೀಡೆ ಮತ್ತು ದೈಹಿಕಶಿಕ್ಷಣ [14050-25050] | 1.48 |
| 4. | ತಾಲ್ಲೂಕು ದೈಹಿಕ ಶಿಕ್ಷಣ ಸಮನ್ವಯಾಧಿಕಾರಿಗಳು [8825-16000] | 202 | ತಾಲ್ಲೂಕು ಕ್ರೀಡೆ ಮತ್ತು ದೈಹಿಕ ಶಿಕ್ಷಣಾಧಿಕಾರಿಗಳು [11400-21600] | 6.765 |
| | | 239 | ಒಟ್ಟು | 8.54 |

ಇ. ಈ ಕೆಳಕಂಡ ಹುದ್ದೆಗಳನ್ನು ಸೃಜಿಸಲು ಆದೇಶಿಸಿದೆ.

| ಕ್ರ.ಸಂ | ಸೃಜಿಸಬೇಕಾದ ಹೊಸ ಹುದ್ದೆಗಳ ವಿವರ | ಮೊತ್ತ(ಲಕ್ಷರೂಗಳಲ್ಲಿ) |
|---|---|---|
| 1 | ಕಿರಿಯ ಎ ದರ್ಜೆ ಅಧಿಕಾರಿಗಳ ಹುದ್ದೆಗಳ ಸೃಜನೆ (ಆಯುಕ್ತರು, ಸಾ.ಶಿ.ಇ ಕಛೇರಿ, ಕರ್ನಾಟಕ ಸೆಕೆಂಡರಿ ಶಿಕ್ಷಣ ಪರೀಕ್ಷಾ ಮಂಡಳಿ, ಮತ್ತು ಸಂಶೋಧನೆ ಮತ್ತು ತರಬೇತಿ ಇಲಾಖೆಗಳಲ್ಲಿ ತಲಾ ಒಂದು ಹುದ್ದೆಗಳು) [16000 X 3 X 6 ತಿಂಗಳು] | 2.88 |
| 2. | ಶೈಕ್ಷಣಿಕವಾಗಿ ಅತ್ಯಂತ ಹಿಂದುಳಿದಿರುವ ತಾಲ್ಲೂಕುಗಳಲ್ಲಿ 500ಕ್ಕಿಂತ ಹೆಚ್ಚು ವಿದ್ಯಾರ್ಥಿಗಳಿರುವ ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಗ್ರೇಡ್-1 ದರ್ಜೆಯ 39 ದೈಹಿಕ ಶಿಕ್ಷಕರ ಹುದ್ದೆಗಳನ್ನು ಸೃಜಿಸಲು [12000 X 39 X 6 ತಿಂಗಳು] | 28.08 ✓ |
| 3. | ಶೈಕ್ಷಣಿಕವಾಗಿ ಅತ್ಯಂತ ಹಿಂದುಳಿದಿರುವ ತಾಲ್ಲೂಕು ಗಳಲ್ಲಿ 500ಕ್ಕಿಂತ ಹೆಚ್ಚು ವಿದ್ಯಾರ್ಥಿಗಳಿರುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ 15 ದೈಹಿಕ ಶಿಕ್ಷಣ ಉಪನ್ಯಾಸಕರ ಹುದ್ದೆಗಳನ್ನು ಸೃಜಿಸಲು [15000 X 15 X 6 ತಿಂಗಳು] | 13.50 ✓ |
| | ಒಟ್ಟು ಮೊತ್ತ | 44.46 |

ಮೇಲೆ ಮೇಲ್ದರ್ಜೆಗೇರಿಸಿದ ಮತ್ತು ಹೊಸದಾಗಿ ಸೃಜಿಸಿದ ಹುದ್ದೆಗಳನ್ನು ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಮತ್ತು ಆಯುಕ್ತರು, ಪದವಿ ಪೂರ್ವ ಶಿಕ್ಷಣ ಇಲಾಖೆರವರು ನಿಯಮಾನುಸಾರ ಭರ್ತಿ ಮಾಡತಕ್ಕದ್ದು.

ಸದರಿ ಆದೇಶವನ್ನು ಯೋಜನಾ ಇಲಾಖೆ ಮತ್ತು ಆರ್ಥಿಕ ಇಲಾಖೆಗಳು ಕ್ರಮವಾಗಿ ತಮ್ಮ ಅನಧಿಕೃತ ಟಿಪ್ಪಣಿ ಸಂಖ್ಯೆ ಯೋಇ:70:ಜಶ: 2007 ದಿನಾಂಕ:07-06-207 ಮತ್ತು ಆ.ಇ. 627:ವೆ-8/07/ದಿನಾಂಕ:10-08-2007ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಕೆ.ಶಿವಕಂಠೇಶ್ವರ)
ವಿಶೇಷಾಧಿಕಾರಿಗಳು ಹಾಗೂ ಪದನಿಮಿತ್ತ
ಸರ್ಕಾರದ ಸಹ ಕಾರ್ಯದರ್ಶಿ(ಯೋಜನೆ)
ಶಿಕ್ಷಣ ಇಲಾಖೆ.

30.8.07

ಗೆ:-

1. ಸಂಕಲನಾಧಿಕಾರಿ, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು.
2. ಮಹಾಲೇಖಪಾಲರು, ಕರ್ನಾಟಕ(ಆಡಿಟ್ 1 ಮತ್ತು 2), ಬೆಂಗಳೂರು.

kpeta.weebly.com

Scanned by CamScanner